

# ಸ್ವರಗಳ ಮರೆಗೆ ಮೋರ್ಚಿಂಗ್ ಭೀಮ

**ಕರ್ನಾಟಕ ಶಾಸ್ತ್ರೀಯ ಸಂಗೀತದ ಲಯವಾದ್ಯ ಮೋರ್ಚಿಂಗ್‌ನಲ್ಲಿ ‘ಭೀಮ ಸಾಧನೆ’ ಮಾಡಿದ ಎಲ್. ಭೀಮಾಚಾರ್ ಬಾರದ ಲೋಕಕ್ಕೆ ಹೋಗಿದ್ದು, ಅವರ ನಾದದ ಘಮಲು ಮಾತ್ರ ಉಳಿದಿದೆ.**

■ ಉಮಾ ಅನಂತ್

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಪಕ್ಕವಾದ್ಯಗಳಾದ ಮೃದಂಗ, ಘಟಂನಷ್ಟೇ ಪ್ರಮುಖ ಸ್ಥಾನ ಪಡೆದ ಮತ್ತೊಂದು ಪುಟಾಣಿ ವಾದ್ಯ ಮೋರ್ಚಿಂಗ್. ಬಾಯಿಯಲ್ಲಿ ಇಟ್ಟು ಉಸಿರಿನ ಮೂಲಕ ಲಯವನ್ನು ನಿಯಂತ್ರಣ ಮಾಡುತ್ತ ನುಡಿಸುವ ಈ ವಾದ್ಯದಲ್ಲಿ ಪಳಗಿದ ಕಲಾವಿದರು ಬಹಳ ವಿರಳ. ಅಂತಹ ವಿರಳಾತಿ ವಿರಳ ಕಲಾವಿದರಲ್ಲಿ ಪ್ರಮುಖರಾಗಿದ್ದವರು ವಿದ್ವಾನ್ ಎಲ್. ಭೀಮಾಚಾರ್.

ಸಂಗೀತದ ಗಂಧಗಾಳಿ ಇಲ್ಲದ ಕುಟುಂಬದಲ್ಲಿ ಜನಿಸಿದ ಭೀಮಾಚಾರ್ ಅವರು, ಸಂಗೀತದಲ್ಲಿ ಅಪಾರ ಆಸಕ್ತಿ ತೋರಿ ‘ಇದನ್ನು ಕಲಿಯುವೆ’ ಎಂದಾಗ ಕುಟುಂಬದವರಿಂದ ತೀವ್ರ ಪ್ರತಿರೋಧ ಎದುರಿಸಬೇಕಾಯಿತು. ಆದರೂ ಸಂಗೀತದಲ್ಲಿ ಭೀಮ ಸಾಧನೆ ಮಾಡಿ ‘ಮೋರ್ಚಿಂಗ್ ಭೀಮ’ ಎಂದೇ ಖ್ಯಾತರಾದವರು ಭೀಮಾಚಾರ್.

ಮೂಲತಃ ತುಮಕೂರು ಜಿಲ್ಲೆ ಶಿರಾದವರಾದ ಭೀಮಾಚಾರ್ ಅವರದು ಅಕ್ಕಸಾಲಿಗರ ಕುಟುಂಬ. ಕಡುಬಡತನದ ಹಿನ್ನೆಲೆಯಲ್ಲಿ ಹಲವಾರು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದು ನೆಲೆಸಿತು. ಓದಿದ್ದು ನಾಲ್ಕನೇ ಕ್ಲಾಸ್. ಹದಿಮೂರು ವರ್ಷ ಇರುವಾಗ ಬೆಂಗಳೂರಿನ ಸಜ್ಜನರಾವ್ ಸರ್ಕಲ್ ಬಳಿ ಇರುವ ಪಾರ್ಕ್‌ನ ಹತ್ತಿರ ಇರುವ ಒಂದು ಛತ್ರದಿಂದ ಮೈಕ್‌ನಲ್ಲಿ ಸಂಗೀತ ಕೇಳಿ ಬರ್ತಾ ಇತ್ತು. ಅದನ್ನು ಕೇಳಿ ಇವರಿಗೂ ಸಂಗೀತ ಕಲಿಯಲೇ ಬೇಕು ಎಂಬ ಆಸೆ ಹುಟ್ಟಿತು. ಮೊದಲು ಎಚ್. ಪುಟ್ಟಾಚಾರ್ ಅವರಿಂದ ಹಾಡುವುದನ್ನು ಕಲಿತರು. ಮೂರು ವರ್ಷ ಸಂಗೀತ ಕಲಿತಾಗಲೇ ವರ್ಣಗಳು ಕೀರ್ತನೆ ಎಲ್ಲವನ್ನೂ ಕಛೇರಿಗಳಲ್ಲಿ ಹಾಡುವಷ್ಟು ಪಳಗಿದರು.

ಮುಂದೆ ಲಯವಾದ್ಯಗಳಾದ ಮೃದಂಗ, ಘಟವನ್ನೂ ಕಲಿತರು. ಹೊಟ್ಟೆಪಾಡಿಗಾಗಿ ಕುಟುಂಬದ ವೃತ್ತಿಯಾದ ಅಕ್ಕಸಾಲಿಗ ವೃತ್ತಿಯನ್ನೇ ಆರಂಭಿಸಿದರು. ಬೆಂಗಳೂರಿನಲ್ಲಿ ಚಿನ್ನದ ಅಂಗಡಿಯನ್ನೂ ತೆರೆದರು. ಒಂದು ದಿನ ಅಂಗಡಿಯಲ್ಲಿ ಗ್ರಾಹಕರ ಜೊತೆಗೆ ಮಾತನಾಡುವಾಗ ಮೋರ್ಚಿಂಗ್ ವಾದ್ಯದ ಬಗ್ಗೆ ಮಾಹಿತಿ ಸಿಕ್ಕಿತು, ಅದೇ ವೇಳೆ ಒಂದು ವಾದ್ಯವನ್ನೂ ಪಡೆದರು. ಅದನ್ನು ಸಂಗೀತ ಗುರು ಪುಟ್ಟಾಚಾರ್ ಅವರಿಗೆ ತೋರಿಸಿ, ‘ನನಗೆ ತಾಳ, ಲಯವಾದ್ಯದಲ್ಲಿ ಆಸಕ್ತಿ ಇರೋದರಿಂದ ನಾನು ಮೋರ್ಚಿಂಗ್ ಅನ್ನೇ ನುಡಿಸಬಹುದೇ’ ಎಂದು ಕೇಳಿದರು. ಗುರುಗಳು ಸಮ್ಮತಿಸಿದ ನಂತರ ಮೋರ್ಚಿಂಗ್ ತಾಲೀಮು ಆರಂಭ. ಆಮೇಲೆ ಕಛೇರಿ ಹಂತಕ್ಕೆ ಈ ವಾದ್ಯವನ್ನು ಬೆಳೆಸಿ ಹಲವು ಕಾರ್ಯಕ್ರಮಗಳಲ್ಲಿ ನುಡಿಸಿ ಇದರ ನಾದವನ್ನು ಕೇಳುಗರಿಗೆ ಉಣಬಡಿಸಿದರು.

1931ರಲ್ಲಿ ಜನಿಸಿದ ಭೀಮಾಚಾರ್ ಅವರು, ಮೋರ್ಚಿಂಗ್ ಕಲಾವಿದರೇ ಇಲ್ಲದ ಕಾಲದಲ್ಲಿ ಅದನ್ನು ನುಡಿಸಲು ಪ್ರಾರಂಭಿಸಿದ್ದು ರೋಚಕ. ಅದು 1947–48ರ ಸಮಯ. ಒಮ್ಮೆ ಮೇಷ್ಟ್ರ ಮನೆಯಲ್ಲಿ ಸಂಗೀತ ಅಭ್ಯಾಸ ಮಾಡುತ್ತಿರುವಾಗ ಅಲ್ಲಿಗೆ ಪಿಟೀಲು ಚೌಡಯ್ಯ ಅವರು ಬಂದು, ನನ್ನ ಕಛೇರಿಗೆ ಮೃದಂಗ ನುಡಿಸುವವರು ಬೇಕು ಎಂದರು. ಆಗ ಅವರಿಗೆ ಮೋರ್ಚಿಂಗ್ ನುಡಿಸಿ ತೋರಿಸಿದರು. ಅವರು ತುಂಬ ಖುಷಿಪಟ್ಟರು. ಅಲ್ಲಿಂದ ಮತ್ತೆ ಮೋರ್ಚಿಂಗ್ ಅನ್ನೇ ನುಡಿಸಲಾರಂಭಿಸಿದರು.

ಆರ್.ಕೆ. ಶ್ರೀಕಂಠನ್, ವೀಣೆ ರಾಜಾರಾವ್, ಕೆ.ಜೆ. ಯೇಸುದಾಸ್, ಟಿ.ವಿ. ಶಂಕರನಾರಾಯಣ್, ಮ್ಯಾಂಡೊಲಿನ್ ಶ್ರೀನಿವಾಸ್, ಕದ್ರಿ ಗೋಪಾಲನಾಥ್, ಲಾಲ್ಗುಡಿ ಜಯರಾಮನ್ ಮುಂತಾದ ಘಟಾನುಘಟಿ ಕಲಾವಿದರಿಗೆ ಮೋರ್ಚಿಂಗ್ ಪಕ್ಕವಾದ್ಯ ನುಡಿಸಿದ ಅಗ್ಗಳಿಕೆ ಇವರದು. ರಾಜ್ಯ ಹೊರರಾಜ್ಯ ಅಲ್ಲದೆ ಅಮೆರಿಕ, ರೋಮ್, ಪ್ಯಾರಿಸ್ ಮುಂತಾದ ಕಡೆಗಳಲ್ಲೂ ಇವರ ಮೋರ್ಚಿಂಗ್ ನಾದ ಅನುರಣಿಸಿದೆ.

ಮಕ್ಕಳಾದ ರಾಜಶೇಖರ್, ಭಾಗ್ಯಲಕ್ಷ್ಮಿ, ಕೃಷ್ಣ ಇಬ್ಬರೂ ಮೋರ್ಚಿಂಗ್‌ನಲ್ಲಿ ತಂದೆಯದೇ ಹಾದಿ ಹಿಡಿದು ವಿಶಿಷ್ಟ ಛಾಪು ಮೂಡಿಸುತ್ತಿದ್ದಾರೆ. 1979ರಲ್ಲಿ ಆಕಾಶವಾಣಿಯಲ್ಲಿ ಮೊದಲ ಬಾರಿಗೆ ಮೋರ್ಚಿಂಗ್ ನುಡಿಸಿದ ಕಲಾವಿದ ಎಂಬ ಖ್ಯಾತಿಯೂ ಇವರ ಬೆನ್ನಿಗಿದೆ.

ಕರ್ನಾಟಕದ ಮೊದಲ ಮೋರ್ಚಿಂಗ್ ಕಲಾವಿದ ಎಂಬ ಹೆಗ್ಗಳಿಕೆಗೂ ಪಾತ್ರರಾದ ಭೀಮಾಚಾರ್ ಅಕ್ಟೋಬರ್ 1ರಂದು ಸಂಗೀತಲೋಕ ಬಿಟ್ಟು ವಿರಮಿಸಿದ್ದಾರೆ. ಲಯವಾದ್ಯದ ದೈತ್ಯಪ್ರತಿಭೆಯೊಂದು ಸಂಗೀತ ಕೊಂಡಿಯಿಂದ ಕಳಚಿಕೊಂಡು ನಿರ್ವಾತ ಸೃಷ್ಟಿಯಾಗಿದ್ದು ಖೇದಕರ.

## ಪ್ರಶಸ್ತಿ ಪುರಸ್ಕಾರ

ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ, ನಾದಜ್ಯೋತಿ ಪುರಸ್ಕಾರ, ಲಯವಾದ್ಯ ಕಲಾರತ್ನ, ಲಯವಾದ್ಯ ಕಲಾನಿಧಿ, ಗಾನ ಕಲಾಭೂಷಣ ಸೇರಿ ವಿವಿಧ ಸಂಗೀತ ಸಂಸ್ಥೆಗಳ ಪುರಸ್ಕಾರಗಳು ಅವರಿಗೆ ಸಂದಿದ್ದವು. ■

## ಪುಟಾಣಿ ವಾದ್ಯ

ಮೋರ್ಚಿಂಗ್ ಒಂದು ಸುಷಿರ ವಾದ್ಯ. ಮೃದಂಗ, ಘಟಂ ತರವೇ ಮೋರ್ಚಿಂಗ್ ಉತ್ತಮ ಲಯ ಕೊಡುತ್ತದೆ. ಇದು ಕಬ್ಬಿಣದಿಂದ ಮಾಡಿದ್ದು, ಎರಡು ಮುಖ್ಯ ಭಾಗಗಳಿರುತ್ತವೆ. ಒಂದು ವಾದ್ಯದ ಫ್ರೇಮ್, ಇನ್ನೊಂದು ಮೀಟುವ ತಂತಿ. ಇದನ್ನು ಬಾಯಿಯಲ್ಲಿ ಇಟ್ಟು ತಂತಿಯನ್ನು ಮೀಟಿದಾಗ ನಾದ ಉತ್ಪತ್ತಿಯಾಗುತ್ತದೆ. ಇದನ್ನು ಬಾಯಿಯೊಳಗೆ ಇಟ್ಟು ಸ್ವಲ್ಪ ಒತ್ತಡ ಹಾಕಿದರೆ ಸಾಕು. ನಾವು ಮಾತನಾಡುವಾಗ ಎಷ್ಟು ಒತ್ತಡ ಹಾಕುತ್ತೇವೋ ಅಷ್ಟೇ ಈ ವಾದ್ಯಕ್ಕೂ ಹಾಕಿದರೆ ಸಾಕು.

ಮೋರ್ಚಿಂಗ್ ನಾದವನ್ನು ಪ್ರತ್ಯೇಕವಾಗಿ ಸವಿಯಬೇಕಾದರೆ ಮಾತ್ರ ‘ತನಿ ಆವರ್ತನ’ವರೆಗೂ ಕಾಯಬೇಕಾಗುತ್ತದೆ.